


‘ಹೈದರ್ ಅಲಿ ಬೆಟ್ಟ’ದ ಮೇಲಿನ ‘ಹೈದರ್ ಅಲಿ ಡ್ರಾಪ್’ ಎಂದು ಕರೆಸಿಕೊಳ್ಳುವ ಬೃಹತ್ ಬಂಡೆ



ಮಂಟಪದ ಒಳಗಿನಿಂದ ಕಾಣಿಸುವ ನಂದಿಬೆಟ್ಟ ಮತ್ತು ಚನ್ನರಾಯನಬೆಟ್ಟ

ಚರಿತ್ರೆಯಲ್ಲಿ ಅದು ರಕ್ತದ ಕಲೆಗಳನ್ನು ಮೆತ್ತಿಕೊಂಡಿರುವುದು ದಾಖಲಾಗಿದೆ. ಈ ಬಂಡೆ ಬೆಟ್ಟದ ಮೇಲೆ ಕೂರಿಸಿದ ರೀತಿಯಿದೆ. ಬಂಡೆಯ ಬಳಿ ಹೋಗಲು ದಾರಿ ಮಾಡಲಾಗಿದೆ. ಸುತ್ತಲೂ ಗೋಡೆ ಸಹ ನಿರ್ಮಿಸಿದ್ದು, ಪ್ರವೇಶಿಸಲು ಸಣ್ಣ ದ್ವಾರ ಇದೆ. ಒಳಗೆ ಒರಟಾದ ವಸ್ತುಗಳಿಂದ ನಿರ್ಮಿತವಾದ ಬಂಗಲೆಯಿದೆ. ಅದರಲ್ಲಿ ಯುರೋಪಿಯನ್ ಬಂಧಿಗಳನ್ನು ಆಗ ಆಳ್ವಿಕೆ ನಡೆಸುತ್ತಿದ್ದ ಹೈದರ್ ಮತ್ತು ಟಿಪ್ಪು ಬಂಧಿಸಿಡುತ್ತಿದ್ದರು. ಬಂಧಿಗಳ ಸಂಖ್ಯೆ ಹೆಚ್ಚಾದಾಗ ಕೆಲವರನ್ನು ಬಂಡೆಯ ತುದಿಗೆ ಕರೆದೊಯ್ದು ತಳ್ಳಿಬಿಡುತ್ತಿದ್ದರು. ಸುಮಾರು 70ರಿಂದ 80 ಅಡಿ ಎತ್ತರದಿಂದ ಬಿದ್ದು ದೇಹದ ಮೂಳೆಗಳನ್ನೆಲ್ಲಾ ಮುರಿದುಕೊಂಡು – ನರಿ, ಕತ್ತೆ ಕಿರುಬ ಮತ್ತು ಹುಲಿಗಳಿಗೆ ಆಹಾರವಾಗುತ್ತಿದ್ದರು. ನಮ್ಮ ದೇಶವಾಸಿಗಳ (ಬ್ರಿಟಿಷರ) ಹಲವರ ಹೆಸರುಗಳು ಅಲ್ಲಿನ ಗೋಡೆಗಳ ಮೇಲೆ, ಮಾಡಿನ ಮೇಲೆ ಕೊರೆದಿರುವುದನ್ನು ನೋಡಿದೆವು. ಈ ಹೈದರ್ ಮತ್ತು ಟಿಪ್ಪು ಅವರ ಇನ್ನೊಂದು ಅತ್ಯಂತ ಇಷ್ಟವಾದ ಡ್ರಾಪ್ ನಂದಿದುರ್ಗದ ಮೇಲಿದೆ. ಅದು ನನಗೆ ಈ ಸಂದರ್ಭದಲ್ಲಿ ನೆನಪಾಗುತ್ತಿದೆ. ನಂದಿದುರ್ಗದ ನೈರುತ್ಯ ಭಾಗದಲ್ಲಿ ಸುಮಾರು ಒಂದು ಸಾವಿರದಿಂದ ಒಂದು ಸಾವಿರದ ಇನ್ನೂರು ಅಡಿಗಳಷ್ಟು ಬೆಟ್ಟ ಕಡಿದಾಗಿದೆ. ಬಂಧಿಯಾಗಿದ್ದ ನಮ್ಮ ಸಿಪಾಯಿಗಳನ್ನು ಗೋಣಿ ಚೀಲದಲ್ಲಿ ಹಾಕಿ ಹೊಲಿದು ಅಲ್ಲಿಂದ ಬಿಸಾಡಿದ್ದಾರೆ. ನೂರಾರು ಸಿಪಾಯಿಗಳು ಈ ರೀತಿ ಸತ್ತಿದ್ದಾರೆ. ಅವರು ಬಿದ್ದಿರಬಹುದಾದ ಬೆಟ್ಟದ ಬುಡಕ್ಕೆ ಸಾಕಷ್ಟು ಕಷ್ಟಪಟ್ಟು ಹೋಗಿ ನಾನು ಪರಿಶೀಲನೆ ಮಾಡಿದ್ದೆ. ಆದರೆ, ಈ ವಿಷಯಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಕುರುಹುಗಳು ಸಿಗಲಿಲ್ಲ. ಕಾಲ ಎಲ್ಲವನ್ನೂ ಅಳಿಸಿ ಹಾಕಿದೆ.’’

ನನ್ನ ಜೊತೆಯಿದ್ದ ಯಲುವಳ್ಳಿ ಮಂಜು ಅವರಿಗೆ ಬ್ರಿಟಿಷ್ ಅಧಿಕಾರಿ ಜೇಮ್ಸ್ ವೆಲ್ಷ್ ಈ ಬೆಟ್ಟದ ಬಗ್ಗೆ ಬರೆದಿರುವುದನ್ನು ಹೇಳಿದೆ. ಅದಕ್ಕವರು, “ಆತ ಬರೆದು ಸುಮಾರು 210 ವರ್ಷಗಳಾಗಿವೆ. ಆತ ಹೇಳುವ ಕಟ್ಟಡದ ಸ್ಥಳದಲ್ಲಿ ಈಗ ಹಳೆಯ ಕಲ್ಲಿನ ಮಂಟಪವಿದೆ. ಅದರ ಹತ್ತಿರವೇ ರುಂಡ ಕಳೆದುಕೊಂಡ ಬಸವಣ್ಣನ ವಿಗ್ರಹ ಅನಾಥವಾಗಿ ಬಿದ್ದಿದೆ. 1761–1782ರ ಅವಧಿಯಲ್ಲಿ ಆಳ್ವಿಕೆ ನಡೆಸಿದ್ದ ಹೈದರ್ ಅಲಿಯ ಹಾಗೂ ಆತನ ಹೆಸರಿನ ಬೆಟ್ಟದ ಬಗ್ಗೆ ಬ್ರಿಟಿಷ್ ಅಧಿಕಾರ ಬರೆದಂತೆ, ಆನಂತರ ಎರಡು ಶತಮಾನಗಳಲ್ಲಿ ಏನೆಲ್ಲಾ ನಡೆಯಿತೋ ತಿಳಿಸುವವರು ಯಾರೂ ಇಲ್ಲ. ಮಂಟಪದ ಕಲ್ಲಿನ ಕಂಬಗಳಿಗೆ ಅಥವಾ ಅಂಗಹೀನವಾದ ಕಲ್ಲಿನ ಬಸವನಿಗೆ ಮಾತು ಬರುವಂತಿದ್ದರೆ ಚೆನ್ನಾಗಿತ್ತು ಅಲ್ಲವೇ!” ಅಂದರು.